## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 819/2015

ಸಾಕ್ಷಿಗೆ ದಿನಾಂಕ 15-11-2025 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 5 P.W.: 8

| | | |
|---|---|---|
| ಹೆಸರು | ಃ | ಓದೋಬಸಪ್ಪ |
| ತಂದೆಯ ಹೆಸರು | ಃ | ದೊಡ್ಡವೀರಪ್ಪ |
| ವಯಸ್ಸು | ಃ | 65 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಏಣಗಿ ಬಸಾಪುರ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ಚಾಸಾ-1 ನನ್ನ ಅಳಿಯ. ಚಾಸಾ-4 ನನ್ನ ಸೊಸೆ. ಚಾಸಾ-8 ನನ್ನ ಅಣ್ಣ. ಚಾಸಾ-9 ನನ್ನ ಅತ್ತೆ, ಚಾಸಾ-10 ನನ್ನ ಅಕ್ಕ, ಚಾಸಾ-12 ನನ್ನ ಸೊಸೆ. ಆರೋಪಿ ನಮ್ಮ ಊರಿನವನು ಅವನು ನನಗೆ ಪರಿಚಯ ಅವನು ಅಂಚೆ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ, ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ದಿಃ 06-12-2013 ರಂದು ಮದ್ಯಾಹ್ನ 12.30 ಗಂಟೆ ಸಮಯದಲ್ಲಿ ಚಾಸಾ-1 ರವರು ಚಾಸಾ-7 ರವರ ಜೊತೆ ತನ್ನ ಮೋಟಾರ್ ಸೈಕಲ್ಲಿನಲ್ಲಿ ತನ್ನ ಮನೆಗೆ ಹೋಗುತ್ತಿರುವಾಗ ಆರೋಪಿತನು ತನ್ನ ಮನೆಯ ಹತ್ತಿರ ರಸ್ತೆಯ ಬಳಿ ನಿಂತುಕೊಂಡು ಚಾಸಾ-1 ರವರಿಗೆ ಅವಾಚ್ಯವಾಗಿ ಬೈದು, ನಿನಗೆ ಜೀವಸಹಿತ ಬಿಡುವುದಿಲ್ಲ ನಿನಗೆ ಕಲ್ಲಿನಿಂದ ಹೊಡೆದು ಸಾಯಿಸುತ್ತೇನಂತಾ ಹೇಳಿ ಚಾಸಾ-1 ರವರ ಮೊಣಕೈಗೆ ಹೊಡೆದು ರಕ್ತಗಾಯಪಡಿಸಿ, ಕುತ್ತಿಗೆಯ ಹಿಂದೆ ಬಲಮುಂಗೈ ಎಡಮೊಣಕಾಲಿಗೆ ಒಡೆದು ಒಳಪೆಟ್ಟು ಮಾಡಿದ್ದು ಇರುತ್ತದೆಂದರೆ ಸರಿಯಲ್ಲ. ಈ ಬಗ್ಗೆ ನಾನು ಚಾಸಾ-1 ರವರಿಗೆ ವಿಚಾರಿಸಿದಾಗ ಈಗ ನಾನು 2 ತಿಂಗಳ ಹಿಂದೆ ನನ್ನ ಸಹೋದರಿ ಚಾಸಾ-4 ರವರು ಹೊಲದ ಕೆಲಸ ಮುಗಿಸಿಕೊಂಡು ಮನೆಗೆ ಬರುತ್ತಿರುವಾಗ ಆರೋಪಿತನು ನನ್ನ ಅಕ್ಕನನ್ನು ಕೆಟ್ಟದಾಗಿ ನೋಡಿ ಚುಡಾಯಿಸಿದ್ದಾನೆ ಅದಕ್ಕೆ ನಾನು ಬುದ್ಧಿವಾದ ಹೇಳಿದರೂ ಸಹಾ ಅವನು ತನ್ನ ಕೆಟ್ಟ ಚಾಳಿ ಬಿಡದೇ ದಿಃ 04-12-2013 ರಂದು ಮದ್ಯಾಹ್ನ 2

ಗಂಟೆಗೆ ನನ್ನ ಅಕ್ಕ ಹೊಲಕ್ಕೆ ಹೋಗಿ ಬರುತ್ತಿರುವಾಗ ದಾರಿಮಧ್ಯದಲ್ಲಿ ಆರೋಪಿತನು ನನ್ನ ಅಕ್ಕಳಿಗೆ ಚುಡಾಯಿಸಿದ್ದು ಹಾಗೂ ನನ್ನ ಅಜ್ಜಿ ಮತ್ತು ಊರಿನವರ ವೃದ್ಧಾಪ್ಯ ವೇತನವನ್ನು ಸರಿಯಾಗಿ ಕೊಡದೇ ಅವರನ್ನು ವಂಚಿಸಿದ ಬಗ್ಗೆ ನಾನು ಈ ದಿನ 12 ಗಂಟೆ ಸಮಯದಲ್ಲಿ ವಿಚಾರಿಸಿದಾಗ ಆರೋಪಿತನು ಚಾಸಾ-1 ರವರಿಗೆ ಅವಾಚ್ಯವಾಗಿ ಬೈದು, ಕೊಳಪಟ್ಟಿ ಹಿಡಿದು ಹೊಟ್ಟೆಗೆ ಒದ್ದಿರುತ್ತಾನೆ, ಚಾಸಾ-7 ರವರು ಗಲಾಟೆ ಬಿಡಿಸಿ ತನ್ನ ವಾಹನದಲ್ಲಿ ಅವನ ಮನೆಗೆ ಬಿಟ್ಟುಬರಲು ಹೋಗುತ್ತಿರುವಾಗ ಆರೋಪಿತನು ಈ ರೀತಿ ಹಲ್ಲೆ ಮಾಡಿರುತ್ತಾನಂತಾ ನನಗೆ ತಿಳಿಸಿದನು ಎಂದರೆ ಸರಿಯಲ್ಲ. ಈ ವಿಚಾರವಾಗಿ ಚಾಸಾ-1 ರವರು ದೂರು ನೀಡಿರುವ ವಿಚಾರ ನನಗೆ ತಿಳಿಯಿತು ಎಂದರೆ ಸರಿಯಲ್ಲ. ಘಟನೆಯ ಕುರಿತು ನಾನು ಪೋಲೀಸರಿಗೆ ದಿಃ07-12-2013 ರಂದು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸದರಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-27 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ